

# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 160 | Pages. 2 | Date: 29-04-2025, TUESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 160 - ಪುಟಗಳು : 2 - 29 ಏಪ್ರಿಲ್ 2025 ಮಂಗಳವಾರ | Ph: 8762954248 | ದರ : ₹1


# ನಗರಸಭೆಯಲ್ಲಿ ನೆಲಕಚ್ಚಿದ ಅವಿಶ್ವಾಸ

## ಜೆಡಿಎಸ್ ವಿರುದ್ಧ ಅಗ್ನಿ ಪರೀಕ್ಷೆಯಲ್ಲಿ ಗೆದ್ದ ಚಂದ್ರೇಗೌಡ | ದಳಪತಿಗಳಿಗೆ ಠಕ್ಕರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹಾಸನ: ನಗರದ ಅಭಿವೃದ್ಧಿ ಹಿತದೃಷ್ಟಿಯಿಂದ ಇನ್ನು ಮೂರು ತಿಂಗಳು ಅವಕಾಶ ನೀಡಿ ಸದ್ಯಕ್ಕೆ ರಾಜೀನಾಮೆ ನೀಡಲ್ಲ ಎಂದು ಸ್ವಪಕ್ಷದ ನಾಯಕರಿಗೆ ಸೆಡ್ಡು ಹೊಡೆದು ಬಹಿರಂಗ ಸಮರ ಸಾರಿದ್ದ ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಅವಿಶ್ವಾಸ ನಿರ್ಣಯ ಗೊತ್ತುವಳಿಯಲ್ಲಿ ಗೆಲುವು ಸಾಧಿಸಿದ್ದು, ಶತಾಯಗತಾಯ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸುತ್ತೇನೆಂದು ಗುಟುರು ಹಾಕಿದ್ದ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರಿಗೆ ಭಾರಿ ಮುಖಭಂಗವಾಗಿದೆ.

ನಗರಸಭೆ ಕುವೆಂಪು ಸಭಾಂಗಣದಲ್ಲಿ ಸೋಮವಾರ ಅವಿಶ್ವಾಸ ನಿರ್ಣಯ ಮಂಡನೆ ಸಭೆ ಉಪಾಧ್ಯಕ್ಷೆ ಹೇಮಲತಾ ಕಮಲ್‌ಕುಮಾರ್ ಅವರ ವಿಶೇಷ ಅಧ್ಯಕ್ಷತೆಯಲ್ಲಿ ನಡೆಯಿತು. ಬಿಜೆಪಿಕಾಂಗ್ರೆಸ್ ಸದಸ್ಯರ ಬೆಂಬಲದಿಂದಾಗಿ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದ್ದು, ಚಂದ್ರೇಗೌಡ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ.

ಅವಿಶ್ವಾಸ ನಿರ್ಣಯದ ಪರವಾಗಿ ಬೇಕಿದ್ದ 26 ಮತಗಳ ಪೈಕಿ, 21 ಮತಗಳು ಸಿಕ್ಕಿದ್ದು, ಜೆಡಿಎಸ್ ಹಿನ್ನಡೆ ಅನುಭವಿಸಿತು. ಕಾಂಗ್ರೆಸ್ ಹಾಗೂ ಬಿಜೆಪಿ ಸದಸ್ಯರು, ಅವಿಶ್ವಾಸ ನಿರ್ಣಯದ ವಿರುದ್ಧ ಮತ ಚಲಾಯಿಸಿದರು. ನಗರಸಭೆಯಲ್ಲಿ ಜೆಡಿಎಸ್‌ನ 17, ಬಿಜೆಪಿಯ 14, ಕಾಂಗ್ರೆಸ್ ಹಾಗೂ ಪಕ್ಷೇತರ ತಲಾ ಇಬ್ಬರು ಸದಸ್ಯರಿದ್ದಾರೆ. ಇದರ ಜೊತೆಗೆ ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ. ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಸಭೆಯಲ್ಲಿ ಹಾಜರಾಗಿ ಒಟ್ಟು 38 ಮತಗಳಿದ್ದವು. ಎಂ.ಚಂದ್ರೇಗೌಡ ತಟಸ್ಥವಾಗಿ ಉಳಿದಿದ್ದರಿಂದ 37 ಮತಗಳು ಚಲಾವಣೆ ಆಗಬೇಕಿತ್ತು. ಅವುಗಳ ಪೈಕಿ ಅವಿಶ್ವಾಸ ನಿರ್ಣಯದ ಪರವಾಗಿ 26 ಮತಗಳು ಅಗತ್ಯವಾಗಿದ್ದವು.

ಜೆಡಿಎಸ್‌ನ ಎಲ್ಲ 16 ಸದಸ್ಯರು, ಶಾಸಕ ಸ್ವರೂಪ್, ಡಾ.ಸೂರಜ್ ರೇವಣ್ಣ ಹಾಗೂ ಕಾಂಗ್ರೆಸ್‌ನ ಒಬ್ಬ ಸದಸ್ಯರು, ಇಬ್ಬರು ಪಕ್ಷೇತರ ಸದಸ್ಯರು ಸೇರಿದಂತೆ 21 ಜನರು ಅವಿಶ್ವಾಸ ನಿರ್ಣಯದ ಪರ ಮತ ಚಲಾಯಿಸಿದರು. ಆದರೆ, ಬಿಜೆಪಿಯ 14, ಕಾಂಗ್ರೆಸ್‌ನ ಒಬ್ಬರು ಮತ್ತು ಸಂಸದ ಶ್ರೇಯಸ್ ಪಟೇಲ್ ಸೇರಿ 16 ಜನರು ಅವಿಶ್ವಾಸ ನಿರ್ಣಯದ ವಿರುದ್ಧ ಮತ ಹಾಕಿದರು.

### ಜನರ ಆತ್ಮ ಗೌರವದ ಗೆಲುವು

ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಮಾತನಾಡಿ, ಅವಿಶ್ವಾಸ ನಿರ್ಣಯ ಜಿಲ್ಲೆಯ ಜನತೆಯ ಸ್ವಾಭಿಮಾನದ ಪ್ರಶ್ನೆಯಾಗಿತ್ತು. ಇದು ಜನರ ಆತ್ಮಗೌರವದ ಗೆಲುವು. ಪ್ರೀತಂ ಗೌಡ ಶ್ರೇಯಸ್ ಬೆಂಬಲ ನೀಡಿದ್ದು ಅವರು ಹೇಳಿದ ದಾರಿಯಲ್ಲಿ ನಡೆಯುವೆ ಎಂದು ಹೇಳಿದರು.

ನಗರ ಅಭಿವೃದ್ಧಿ ಶ್ರಮಿಸುವೆ. ಹಾಸನಾಂಬೆ ದೇವಿ ಆಶೀರ್ವಾದ ಇದೆ. ನಗರಸಭೆ ಸದಸ್ಯರಿಗೆ ಧನ್ಯವಾದಗಳು ಬಿಜೆಪಿ ಸದಸ್ಯರಿಗೆ ಅಭಾರಿಯಾಗಿದ್ದೇನೆ. ನಾನು ಅನ್ಯಾಯ ಮಾಡಿದ್ದೇನಾ?. ಅವ್ಯವಹಾರ ಮಾಡಿದ್ದೇನಾ? 34 ತಿಂಗಳ ಸಹಕಾರ ಕೇಳಿದೆ ಆದರೆ ಕೊಡಲಿಲ್ಲ. ನಮ್ಮವರೂ ಕೆಲವರು ನನ್ನ ಪರವಿದ್ದು ಪ್ರೀತಂಗೌಡ ಬೆಂಬಲ ನೀಡಿದರು. ಉತ್ತಮ ಕೆಲಸ ಮಾಡುವೆ ಎಂದು ಹೇಳಿದರು.



### ಸೋಲಿಗೆ ಅಪವಿತ್ರ ಮೈತ್ರಿ ಕಾರಣ

ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಮಾತನಾಡಿ, ನಗರಸಭೆ ಅಧ್ಯಕ್ಷರ ಅವಧಿಯನ್ನು ಜೆಡಿಎಸ್‌ನ ಎಲ್ಲ ಸದಸ್ಯರಿಗೂ ಹಂಚಿಕೆ ಮಾಡುವ ನಿಟ್ಟನಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲಾಗಿತ್ತೇ ಹೊರತು ಚಂದ್ರೇಗೌಡರ ವಿರುದ್ಧ ಅಲ್ಲ ಎಂದು ಪ್ರತಿಕ್ರಿಯಿಸಿದರು.

ಜೆಡಿಎಸ್‌ನ ಎಲ್ಲ ಸದಸ್ಯರು ಅವಿಶ್ವಾಸ ನಿರ್ಣಯದ ಪರವಾಗಿ ಇದ್ದರು. ಆದರೆ ಬಿಜೆಪಿ-ಕಾಂಗ್ರೆಸ್ ಅಪವಿತ್ರ ಮೈತ್ರಿ ಮಾಡಿಕೊಳ್ಳುವ ಮೂಲಕ ಅನಿರೀಕ್ಷಿತ ಬೆಳವಣಿಗೆಗೆ ಕಾರಣರಾಗಿದ್ದಾರೆ ಎಂದು ಹೇಳಿದರು.

ರಾಜ್ಯ ಕೇಂದ್ರದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದು ಜಿಲ್ಲೆಯಲ್ಲಿ ಮಾತ್ರ ಕಾಂಗ್ರೆಸ್ ಬಿಜೆಪಿ ಮೈತ್ರಿ ಮಾಡಿಕೊಂಡಂತೆ ವರ್ತಿಸುತ್ತಿರುವುದು ದಿಗ್ಭ್ರಮೆ ಮೂಡಿಸಿದೆ. ಸಂಸದರ ಚುನಾವಣೆಯಲ್ಲಿಯೂ ಇದೆ ರೀತಿ ಆಗಿದೆ. ಎರಡೂ ರಾಷ್ಟ್ರೀಯ ಪಕ್ಷಗಳು ಒಂದಾಗಿದ್ದು ನಿಜ ಬಣ್ಣ ಬಯಲಾದಂತಾಗಿದೆ ಎಂದು ಹೇಳಿದರು. ನಗರಸಭೆಯ ಬೆಳವಣಿಗೆಗಳ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ಎಚ್.ಡಿ. ದೇವೇಗೌಡರ ಗಮನಕ್ಕೆ ತರಲಾಗುವುದು. ಹೊಂದಾಣಿಕೆ ಹಾಗೂ ವಿಪ್ ಜಾರಿ ಸಂಬಂಧ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರೊಂದಿಗೆ ಜೆಡಿಎಸ್ ನಾಯಕ ಎಚ್.ಡಿ. ರೇವಣ್ಣ ಮಾತನಾಡಿದ್ದರು. ಆದರೆ ಬಿಜೆಪಿ-ಕಾಂಗ್ರೆಸ್‌ನ ಅಪವಿತ್ರ ಮೈತ್ರಿಯಿಂದ ಈ ಎಲ್ಲ ಬೆಳವಣಿಗೆ ಆಗಿದೆ ಎಂದು ಹೇಳಿದರು.

### ಅಂದು ಶ್ರೀ ವಿದ್ಯಾ ಇಂದು ಚಂದ್ರೇಗೌಡ

ನಗರಸಭೆಯಲ್ಲಿ ಜೆಡಿಎಸ್ ವಿರುದ್ಧ ಸ್ವಪಕ್ಷೀಯರು ತಿರುಗಿ ಬಿದ್ದಿದ್ದು ಇದು ಮೊದಲೇನಲ್ಲ. ಕಳೆದ ಹತ್ತು ವರ್ಷಗಳ ಹಿಂದೆ ಶ್ರೀವಿದ್ಯಾ ಆನಂದ್ ಅವರು ಸಹ ಕಾಂಗ್ರೆಸ್ ಬೆಂಬಲ ಪಡೆದು ಜೆಡಿಎಸ್‌ಗೆ ಸೆಡ್ಡು ಹೊಡೆದು ಅವಿಶ್ವಾಸ ಗೊತ್ತುವಳಿಯನ್ನು ಮಣಿಸಿ ಜಯಭೇರಿ ಬಾರಿಸಿದ್ದರು. ಅದೇ ಘಟನೆ ಈಗ ಪುನರಾವರ್ತನೆಯಾಗಿದೆ.

ಆಂತರಿಕ ಒಪ್ಪಂದದಂತೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮಾಜಿ ಸಚಿವ ಹೆಚ್.ಡಿ. ರೇವಣ್ಣ ಆಗ್ರಹಿಸಿದ್ದರೂ ಶ್ರೀವಿದ್ಯಾ ಆನಂದ್ ಕಾಂಗ್ರೆಸ್ ಬೆಂಬಲದಿಂದ ಸ್ಥಾನದಲ್ಲಿ ಮುಂದುವರೆದಿದ್ದರು. ಈಗ ಚಂದ್ರೇಗೌಡ ಅವರು ಬಿಜೆಪಿ ಸದಸ್ಯರ ಸಹಕಾರದಿಂದ ತಮ್ಮ ಕಾರ್ಯ ಸಾಧಿಸಿಕೊಂಡಿದ್ದಾರೆ.

### ತಡವಾಗಿ ಬಂದ ಜೆಡಿಎಸ್ ಸದಸ್ಯರು

ನಗರಸಭೆ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸೋಮವಾರ ಮಧ್ಯಾಹ್ನ 12.30ಕ್ಕೆ ಸಭೆ ನಿಗದಿ ಮಾಡಲಾಗಿತ್ತು. ಬಿಜೆಪಿ ಸದಸ್ಯರೊಂದಿಗೆ ಬಂದ ಅಧ್ಯಕ್ಷ ಎಂ. ಚಂದ್ರೇಗೌಡ, ಸಮಯಕ್ಕೆ ಸರಿಯಾಗಿ ಹಾಜರಾಗಿದ್ದರು. ನಂತರ ಸಂಸದ ಶ್ರೇಯಸ್ ಪಟೇಲ್, ಕಾಂಗ್ರೆಸ್ ಸದಸ್ಯರು ಹಾಗೂ ನಾಮ ನಿರ್ದೇಶಿತ ಕೆಲ ಸದಸ್ಯರೊಂದಿಗೆ ಸಭೆಗೆ ಹಾಜರಾದರು. ಆದರೆ ಜೆಡಿಎಸ್‌ನ ಯಾವೊಬ್ಬ ಸದಸ್ಯರು ಸಭೆಯಲ್ಲಿ ಕಾಣಿಸಲಿಲ್ಲ.

ನಂತರ ಬಿಜೆಪಿಯ ಸದಸ್ಯ ಸಂತೋಷ್ ಹಾಗೂ ಇತರೆ ಸದಸ್ಯರು ಅವಿಶ್ವಾಸ ನಿರ್ಣಯ ಮಂಡಿಸುವಂತೆ ಪ್ರಭಾರ ಆಯುಕ್ತ ರಮೇಶ್ ಹಾಗೂ ಅಧ್ಯಕ್ಷತೆ ವಹಿಸಿದ್ದ ನಗರಸಭೆ ಉಪಾಧ್ಯಕ್ಷೆ ಹೇಮಲತಾ ಅವರನ್ನು ಒತ್ತಾಯಿಸಿದರು. ಆದರೆ ಆಯುಕ್ತರು ಅರ್ಧ ಗಂಟೆ ಕಾಲಾವಕಾಶ ನೀಡುವುದಾಗಿ ಹೇಳಿದರು.

ಮಧ್ಯಾಹ್ನ 12.40ಕ್ಕೆ ಜೆಡಿಎಸ್ ಸದಸ್ಯರು, ಶಾಸಕ ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಸಭೆಗೆ ಹಾಜರಾದರು. ಅವಿಶ್ವಾಸ ನಿರ್ಣಯದ ಪರ ಹಾಗೂ ವಿರುದ್ಧ ಮತ ಚಲಾಯಿಸುವಂತೆ ಆಯುಕ್ತರು ಸೂಚಿಸಿದರು.



### ಅಧ್ಯಕ್ಷರ ಕೊಠಡಿಯಲ್ಲಿ ಪ್ರೀತಂ ಗೌಡ ಫೋಟೊ

ನಗರಸಭೆ ಅಧ್ಯಕ್ಷ ಎಂ. ಚಂದ್ರೇಗೌಡ ಅವರ ಕೊಠಡಿಯಲ್ಲಿ ಸೋಮವಾರ ಮಾಜಿ ಶಾಸಕ ಪ್ರೀತಂ ಜೆ. ಗೌಡ ಅವರ ಫೋಟೊ ಪ್ರತ್ಯಕ್ಷವಾಗಿದೆ.

ಶಾಸಕ ಹೆಚ್.ಪಿ. ಸ್ವರೂಪ್ ಅವರ ಅತ್ಯಾಪ್ತರಾಗಿದ್ದ ಅವರು 2024ರ ಆ. 21ರಂದು ನಡೆದ ಚುನಾವಣೆಯಲ್ಲಿ ಶಾಸಕರ ಸಹಕಾರದಿಂದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆದರೆ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕ್ಷೇತ್ರ ಶಾಸಕರಿಗೆ ಸೆಡ್ಡು ಹೊಡೆದು ಹಠ ಸಾಧಿಸಿದ್ದಾರೆ. ಹೀಗಾಗಿ ಪ್ರೀತಂ ಗೌಡರ ಋಣ ಸಂದಾಯಕ್ಕಾಗಿ ಫೋಟೊ ಹಾಕಿಕೊಂಡಿದ್ದಾರೆ.

ಎಂ. ಚಂದ್ರೇಗೌಡ ಒಳ್ಳೆಯ ಕೆಲಸಗಾರ. ನಗರ ಅಭಿವೃದ್ಧಿಗೆ ತಮ್ಮದೇಯಾದ ದೃಷ್ಟಿಕೋನ ಹೊಂದಿದ್ದಾರೆ. ಅವರ ವ್ಯಕ್ತಿತ್ವ ನೋಡಿ ಪಕ್ಷಾತೀತವಾಗಿ ಅವರಿಗೆ ಮತ ಹಾಕಿದ್ದೇನೆ. ಅವರ ಕೆಲಸದ ಕಾರ್ಯವೈಖರಿ ನನಗೆ ಇಷ್ಟವಾಗಿ, ಅವರ ಅಭಿವೃದ್ಧಿ ಮೆಚ್ಚಿ ಬೆಂಬಲಿಸಿದ್ದೇನೆ. ಇಲ್ಲಿ ಬಿಜೆಪಿ-ಕಾಂಗ್ರೆಸ್ ಒಂದಾಗಿಲ್ಲ, ವ್ಯಕ್ತಿತ್ವ, ಅಭಿವೃದ್ಧಿ ನೋಡಿ ಬೆಂಬಲಿಸಿದ್ದೇವೆ.

-ಶ್ರೇಯಸ್ ಪಟೇಲ್, ಸಂಸದ

### ಮೈತ್ರಿ ಪಾಲಿಸದೆ ತಿರುಗಿಬಿದ್ದ ಬಿಜೆಪಿ

ಆರಂಭದಿಂದಲೂ ಮಾಜಿ ಸಚಿವ ಎಚ್.ಡಿ. ರೇವಣ್ಣ ಅವರನ್ನು ರಾಜಕೀಯವಾಗಿ ವಿರೋಧಿಸಿಕೊಂಡೇ ಬಂದಿರುವ ಮಾಜಿ ಶಾಸಕ ಪ್ರೀತಂ ಗೌಡ ಹಾಗೂ ಸಂಸದ ಶ್ರೇಯಸ್ ಪಟೇಲ್ ಇದೀಗ ಜೆಡಿಎಸ್‌ಗೆ ತಿರುಗೇಟು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ಇತ್ತೀಚೆಗೆ ನಡೆದ ಉಪಾಧ್ಯಕ್ಷರ ಚುನಾವಣೆಯ ವೇಳೆ ಜೆಡಿಎಸ್ ಅಭ್ಯರ್ಥಿಯನ್ನು ಬೆಂಬಲಿಸುವ ಮೂಲಕ ಮೈತ್ರಿ ಧರ್ಮ ಪಾಲಿಸಿದ್ದ ಬಿಜೆಪಿ ಅವಿಶ್ವಾಸ ನಿರ್ಣಯದ ವೇಳೆ ತಿರುಗಿ ಬಿದ್ದಿದೆ. ಪ್ರೀತಂಗೌಡ ಶ್ರೇಯಸ್ ಪಟೇಲ್ ಒಂದಾಗಿರುವ ಬಗ್ಗೆ ಸುಳಿವು ಪಡೆದಿದ್ದ ಎಚ್.ಡಿ. ರೇವಣ್ಣ ಸಭೆಗೂ ಮುನ್ನ ನಗರದ ಖಾಸಗಿ ಹೋಟೆಲ್‌ನಲ್ಲಿ ನಗರಸಭೆ ಜೆಡಿಎಸ್ ಸದಸ್ಯರು ಶಾಸಕ ಸ್ವರೂಪ್ ಅವರೊಂದಿಗೆ ಸಭೆ ನಡೆಸಿದ್ದರು. ಅವಿಶ್ವಾಸ ನಿರ್ಣಯದ ಪರವಾಗಿ ಬೇಕಿದ್ದ ಮತಗಳನ್ನು ಕ್ರೋಢೀಕರಿಸುವ ಕುರಿತು ಸಭೆಯಲ್ಲಿ ಚರ್ಚೆಗಳು ನಡೆದಿದ್ದವು.

## ನಗರದಲ್ಲಿ ಬಸವೇಶ್ವರ ಜಯಂತಿ ನಾಳೆ

ಹಾಸನ: ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಏ. 30ರ ಬುಧವಾರ ಶ್ರೀ ಬಸವೇಶ್ವರ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವೀರಶೈವ ಲಿಂಗಾಯತ ಸಂಘದ ಅಧ್ಯಕ್ಷ ಬಿ.ಪಿ. ಐಸಾಮಿಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ನಗರದ ಅರಳೇಪೇಟೆಯಲ್ಲಿರುವ ಶ್ರೀ ಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಅಂದು ಬೆಳಿಗ್ಗೆ 6 ರಿಂದ ರುದ್ರಾಭಿಷೇಕ, ಮಹಾಪೂಜೆ, ಮಹಾ ಮಂಗಳಾರತಿ ನಡೆಯಲಿದೆ. ಬೆಳಗ್ಗೆ 9.15 ರಿಂದ ಬಸವೇಶ್ವರ




ಸ್ವಾಮಿಯ ರಥೋತ್ಸವ ನಂದಿಧ್ವಜ, ಕರಡಿ ಮಜಲು, ಮಂಗಳವಾದ್ಯದೊಂದಿಗೆ ಬಸವೇಶ್ವರರ ಭಾವಚಿತ್ರವಿರುವ ಬೆಳ್ಳಿರಥ ಮೆರವಣಿಗೆ ನಡೆಯಲಿದ್ದು, ಜಿಲ್ಲಾಧಿಕಾರಿ ಸಿ. ಸತ್ಯಭಾಮ ಚಾಲನೆ ನೀಡಲಿದ್ದಾರೆ. ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಹಾಗೂ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸಭಾ ಕಾರ್ಯಕ್ರಮದ ನಂತರ ಪ್ರಸಾದ ವಿನಿಯೋಗ ಇರುತ್ತದೆ. ಜಿಲ್ಲಾ ವೀರಶೈವ ಲಿಂಗಾಯತ ಸಂಘ ಮತ್ತು ಸಮಾಜದ ವಿವಿಧ ಸಂಘ ಸಂಸ್ಥೆಗಳು ಹಾಗು ಸಮಾಜದ ಸಹಕಾರದೊಡನೆ ಜಯಂತಿ ನಡೆಯಲಿದೆ. ಎಲ್ಲರೂ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕು ಎಂದು ಕೋರಿದರು.

## ರಕ್ಷಿದಿ ರಂಗ ಮಂದಿರದಲ್ಲಿ ಮಕ್ಕಳ ನಾಟಕ ಪ್ರದರ್ಶನ



ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ತಾಲ್ಲೂಕಿನ ರಕ್ಷಿದಿ ಗ್ರಾಮದ ಪೂರ್ಣಚಂದ್ರ ತೇಜಸ್ವಿ ರಂಗ ಮಂದಿರದಲ್ಲಿ ಬೆಳ್ಳೇಕೆರೆ ಜೈ ಕರ್ನಾಟಕ ಸಂಘದಿಂದ ಆಯೋಜಿಸಿದ್ದ ಕೊಕ್ಕು-ರೆಕ್ಕೆ-ಪುಕ್ಕ 2025 ಮಕ್ಕಳ ರಂಗ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮೂರ್ಕಣ್ಣು ಗುಡ್ಡದಲ್ಲಿ ಚಂದ್ರನಿಲ್ಲದ ರಾತ್ರಿ ನಾಟಕ ಪ್ರದರ್ಶನ ಕಂಡಿತು.

ಈ ನಾಟಕವು ಎನ್.ಕೆ. ಹನುಮಂತಯ್ಯ ಅವರ ಚಂದ್ರನಿಲ್ಲದ ರಾತ್ರಿ ಹಾಗೂ ಪ್ರಸಾದ್ ರಕ್ಷಿದಿ ಅವರ ಮೂರ್ಕಣ್ಣು ಗುಡ್ಡ ಕೃತಿಗಳ ಸಂಯೋಜನೆಯಾಗಿದೆ. ನಾಟಕದ ವಿನ್ಯಾಸ ಮತ್ತು ನಿರ್ದೇಶನವನ್ನು ನವೀನ್ ಸಾಣೇಹಳ್ಳಿ ನಿರ್ವಹಿಸಿದರು. ಬಿಂದು ಶ್ರೀ ರಕ್ಷಿದಿಯವರು ಸಂಗೀತ, ರವಿ ಪೆರ್ಲಂಪಾಡಿ ಕಲೆ ಮತ್ತು ಸಂಗೀತ ಸಂಯೋಜನೆ ಮಾಡಿದರು. ರಾಧೆ ರಕ್ಷಿದಿ ರಂಗ ನಿರ್ವಹಣೆ ಮಾಡಿದರು.

ಕಲಾವಿದರಾದ ಪೂಜಿತ್, ಪ್ರದ್ಯುತ್, ಆರ್.ಎಂ. ಹೃದ್ದಿಕ್, ಕೆ.ವಿ. ಮಾನಿಕ್ಯ, ಆರ್. ರಿತಿಕ್ಷಾ, ಆರ್. ರಿತ್ವಿಕಾ, ಡಿ.ಕೆ. ಹನಿ, ಟಿ.ಅದ್ವೈತ್ ಗೌಡ, ಎಂ.ಯು. ಧನುಷ್, ಎಂ.ಎಂ. ಧನ್ವಿತ್, ಮಾಯಾಂಕ್ ರಾಜ್, ಆಘ್ನಾ ಹೆಚ್. ರಾವ್, ಎಸ್. ಬೃಂದಾ, ಪವಿತ್ರ, ಹೆಚ್. ರಶ್ಮಿತಾ, ನಿಶಾಂತ್, ಪಿ. ನಿತ್ಯಾ, ದೀಪಿಕಾ, ನೈತಿಕ್ ಎಸ್.ಗೌಡ, ಧವನ್ ಪ್ರಾಣ್, ದೃವಿನ್ ಗೌಡ, ಕೆ. ಹರ್ಷಿತಾ, ಖುಷಿ ಗೌಡ, ಮೋಕ್ಷ ಮತ್ತು ಆರ್.ಬಿ. ರುಶಿಲ್, ಹೆಚ್.ಬಿ. ತನ್ವಿಶ್ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರ ಗಮನ ಸೆಳೆದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಯಾಮನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎನ್.ಜಿ. ಸಚಿನ್ ವಹಿಸಿದ್ದರು. ಖ್ಯಾತ ರಂಗ ನಿರ್ದೇಶಕ ಸಿ. ಬಸವಲಿಂಗಯ್ಯ ಹಾಗೂ ಸಮಾಜ ಸೇವಕ ಶಿವಶಂಕರ ಇದ್ದರು.

## ಸ್ಕೂಟರ್ ಡಿಕ್ಕಿಯಿಂದ 13 ಲಕ್ಷ ರೂ. ಕಳವು

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಸಕಲೇಶಪುರ: ತುರ್ತು ಕಾರ್ಯಕ್ಕಾಗಿ ಬ್ಯಾಂಕ್‌ನಲ್ಲಿ ಚಿನ್ನಾಭರಣ ಅಡವಿಟ್ಟು ತಂದಿದ್ದ 13 ಲಕ್ಷ ರೂ.ಗಳನ್ನು ಅಪಹರಿಸಿರುವ ಘಟನೆ ಸೋಮವಾರ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಕುಡುಗರಹಳ್ಳಿಯ ಅಡುಗೆ ಗುತ್ತಿಗೆದಾರ ಯೋಗೇಶ್ ಹಣ ಕಳೆದುಕೊಂಡವರು. ತುರ್ತು ಅವಶ್ಯಕತೆಯಿದ್ದರಿಂದ ಮನೆಯಲ್ಲಿದ್ದ ಚಿನ್ನಾಭರಣವನ್ನು ಬ್ಯಾಂಕ್ ಆಫ್ ಬರೋಡದಲ್ಲಿ ಗಿರವಿ ಇಟ್ಟು 13 ಲಕ್ಷ ರೂ. ಪಡೆದಿದ್ದ ಯೋಗೇಶ್, ಬ್ಯಾಂಕ್ ಖಾತೆಯಲ್ಲಿದ್ದ 2.5 ಲಕ್ಷ ರೂ. ಡ್ರಾ ಮಾಡಿಕೊಳ್ಳಲು ಕೆನರಾ ಬ್ಯಾಂಕ್‌ಗೆ ಬಂದಿದ್ದರು. ಸ್ಕೂಟಿಯ ಲಗ್ಗೇಜ್ ಬಾಕ್ಸ್‌ನಲ್ಲಿ ಹಣ ಇರುವುದನ್ನು ದೂರದಿಂದಲೇ ಗಮನಿಸಿದ್ದ ಅವರು ಬ್ಯಾಂಕ್ ಒಳಗೆ ಹೋಗುವುದನ್ನೇ ಕಾದು ನಿಂತಿದ್ದರು. ಯೋಗೇಶ್ ಅವರು ರಸ್ತೆಪಕ್ಕ ವಾಹನ




ನಿಲ್ಲಿಸಿ ಹೋಗುತ್ತಿದ್ದಂತೆ ಕ್ಷಣಮಾತ್ರದಲ್ಲಿ ಬಂದ ಕಳ್ಳರು ಲಗ್ಗೇಜ್ ಬಾಕ್ಸ್ ಒಡೆದು ಹಣದ ಸಮೇತ ಪರಾರಿಯಾಗಿದ್ದಾರೆ.

ಯೋಗೇಶ್ ಅವರು ಸ್ಕೂಟಿ ಬಳಿ ಬಂದು ನೋಡಿದಾಗ ಬಾಕ್ಸ್ ಒಡೆದಿರುವುದು ಗೊತ್ತಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಸಮೀಪದ ಅಂಗಡಿಗಳಲ್ಲಿನ ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದಾಗ ನಾಲ್ವರು ಕಳ್ಳರು ಹಣ ಎಗರಿಸಿರುವುದು ಗೊತ್ತಾಗಿದೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

## ಡಿವೈಡರ್ ಹಾರಿ ಯುವಕನ ಕೊಂದ ಕಾರು!

ಹಾಸನ: ಚಾಲಕನ ನಿಯಂತ್ರಣ ತಪ್ಪಿದ ಕಾರೊಂದು ಡಿವೈಡರ್ ಗೆ ಡಿಕ್ಕಿಯಾಗಿ ಎದುರಿನಿಂದ ಬಂದ ಕಾರಿನ ಮೇಲೆ ಬಿದ್ದಿದ್ದರಿಂದ ಯುವಕ ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಕೋರವಂಗಲ ರೈಲ್ವೆ ನಿಲ್ದಾಣ ಸಮೀಪ ಭಾನುವಾರ ನಡೆದಿದೆ.

ದುದ್ದ ಹೋಬಳಿ ಪೂವಗಮೆ ಗ್ರಾಮದ ರಂಜಿತ್ (22) ಮೃತರು. ಹಾಸನದ ಸತ್ಯಮಂಗಲದಿಂದ ಗ್ರಾಮಕ್ಕೆ ಮರಳುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಕಾರು ಡಿವೈಡರ್‌ಗೆ ಡಿಕ್ಕಿಯಾಗಿ ರಂಜಿತ್ ಓಡಿಸುತ್ತಿದ್ದ ಕಾರಿನ ಮೇಲೆ ಹಾರಿ ಬಿದ್ದಿದೆ. ಅಪಘಾತದ ರಭಸಕ್ಕೆ ಕಾರು ಸಂಪೂರ್ಣ ಜಖಂಗೊಂಡು ರಂಜಿತ್‌ನ ತಲೆಗೆ ಬಲವಾದ ಪೆಟ್ಟು ಬಿದ್ದಿದೆ. ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದ ಯುವಕನನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಗ್ನಿಶಾಮಕ ಹುತಾತ್ಮರ ಸ್ಮಾರಕ ಲೋಕಾರ್ಪಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಅರಸೀಕೆರೆ: ಸಾರ್ವಜನಿಕರ ಆಸ್ತಿ, ಪ್ರಾಣ ರಕ್ಷಣೆಗೆ ಅಗ್ನಿಶಾಮಕ ದಳ ನಿರಂತರವಾಗಿ ಶ್ರಮಿಸುತ್ತಿದೆ ಎಂದು ಪ್ರಾಂತೀಯ ಅಗ್ನಿಶಾಮಕ ಮುಖ್ಯ ಅಧಿಕಾರಿ ಪಿ.ಎಸ್. ಜಯರಾಮ್ ಹೇಳಿದರು.

ನಗರದ ಅಗ್ನಿಶಾಮಕ ಠಾಣಾ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಹುತಾತ್ಮರ ಸ್ಮಾರಕ ಉದ್ಘಾಟಿಸಿ ಮಾತನಾಡಿದ ಅವರು, ಮಿಲಿಟರಿ, ಆರಕ್ಷಕ ಇಲಾಖೆಯ ಸಿಬ್ಬಂದಿ ರೀತಿ ಜನರ ಆಸ್ತಿ ಪಾಸ್ತಿ, ಜಾನುವಾರು ರಕ್ಷಣೆ ವಿಷಯದಲ್ಲಿ ಅಗ್ನಿಶಾಮಕ ದಳ ಶಕ್ತಿಮೀರಿ ಕೆಲಸ ಮಾಡುತ್ತಿದೆ. ಕರ್ತವ್ಯದ ವೇಳೆ ಜೀವ ಕಳೆದುಕೊಂಡವರೂ ಇದ್ದಾರೆ. ಅವರ ಸ್ಮರಣಾರ್ಥ ಸ್ಮಾರಕ



ನಿರ್ಮಿಸಿ ಸ್ಮರಣೆಗೆ ಮುಂದಾಗಿರುವುದು ಹುತಾತ್ಮರಿಗೆ ನಿಜವಾದ ಗೌರವ ನೀಡಿದಂತಾಗಿದೆ ಎಂದರು.

ಅಗ್ನಿಶಾಮಕ ಠಾಣೆಯ ಆವರಣದಲ್ಲಿ ನಿರ್ಮಿಸಿರುವ ಹುತಾತ್ಮರ ಸ್ಮಾರಕ ವ್ಯವಸ್ಥಿತವಾಗಿ ನಿರ್ಮಾಣಗೊಂಡಿದೆ. ಬಾಳೆ, ಹಲಸು, ಅಡಿಕೆ, ತೆಂಗು, ಪರಿಸರವನ್ನು ಅವಲೋಕಿಸಿ ಸ್ಮಾರಕ ನಿರ್ಮಿಸಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು.

ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ. ನವೀನ್ ಕುಮಾರ್, ಸ್ಥಳೀಯ ಠಾಣಾಧಿಕಾರಿ ಕೆ.ಎಂ. ಪುಟ್ಟಮಲ್ಲೇಗೌಡ ಮಾತನಾಡಿದರು.

## ರೈತರಿಂದ ಹಣ ವಸೂಲಿ: ಶಾಸಕ ರೇವಣ್ಣ ಆಕ್ರೋಶ

ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್

ಹೊಳೆನರಸೀಪುರ: ಬೆಂಬಲ ಬೆಲೆಯಡಿ ರಾಗಿ ಖರೀದಿಗೆ ರೈತರಿಂದ ಹಣ ಪಡೆಯಲಾಗುತ್ತಿದೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಖರೀದಿಗೆ ಕೇಂದ್ರಕ್ಕೆ ಸೋಮವಾರ ದಿಢೀರ್ ಭೇಟಿ ನೀಡಿದ ಶಾಸಕ ಎಚ್.ಡಿ. ರೇವಣ್ಣ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಖರೀದಿ ಕೇಂದ್ರದಲ್ಲಿ ಅಧಿಕಾರಿಗಳು ರೈತರಿಗೆ ತೂಕದಲ್ಲಿ ಮೋಸ ಮಾಡುತ್ತಿದ್ದು, ರೈತರಿಂದ ಹಣ ಪಡೆಯುತ್ತಿದ್ದಾರೆ. ಹಳ್ಳಿಗಳಿಂದ ತಂದ ರಾಗಿಯನ್ನು ಸಕಾಲದಲ್ಲಿ ಇಳಿಸಿಕೊಳ್ಳದೆ ಎರಡು-ಮೂರು ದಿನ ಗಾಡಿಗಳನ್ನು ನಿಲ್ಲಿಸಿ ತೊಂದರೆ



ನೀಡುತ್ತಿದ್ದಾರೆ. ರೈತರಲ್ಲದವರಿಂದ ರಾಗಿ ಖರೀದಿಸುತ್ತಿದ್ದಾರೆ ಎಂದು ಅನೇಕರು ಆರೋಪಿಸಿದ್ದರು.

ಸ್ಥಳದಲ್ಲಿದ್ದ ರಾಗಿ ಖರೀದಿ ಕೇಂದ್ರದ ಅಧಿಕಾರಿ ಸಮದ್ ಅಲಿ ಅವರು, ಇಲ್ಲ ಸಾರ್ ಲೋಡರ್ಸ್‌ಗಳನ್ನು ಕೇಳಿ ಎಂದು ಸಮುಜಾಯಿಷಿ ನೀಡಿದಾಗ ಅಸಮಾಧಾನಗೊಂಡ ರೇವಣ್ಣ, ನೀವು ಹಾಗೂ ಲೋಡರ್ಸ್ ಸೇರಿಯೇ ರೈತರಿಗೆ ಮೋಸ ಮಾಡುತ್ತಿದ್ದೀರಂತೆ.

ಇದೆಲ್ಲ ಇಲ್ಲಿ ನಡೆಯಲ್ಲ. ಇನ್ನು ಮುಂದೆ ಇಂತಹ ದೂರುಗಳು ಬಂದರೆ ನಿಮ್ಮ ಮೇಲೆ ಎಫ್‌ಐಆರ್ ಮಾಡಿಸುತ್ತೇನೆ ಎಂದು ಎಚ್ಚರಿಸಿದರು.

ಇವರೇನಾದರು ನಿಮಗೆ ಮೋಸ ಮಾಡಿದರೆ ನೇರ ತಹಶೀಲ್ದಾರ್‌ಗೆ ದೂರು ನೀಡಿ ಎಂದು ಸ್ಥಳದಲ್ಲಿದ್ದ ರೈತರಿಗೆ ಸಲಹೆ ನೀಡಿದರು.

ರೈತರು ಮಾಪನಕ್ಕಾಗಿ ತಂದ ಮೂಟೆಯಲ್ಲಿ ಹೆಚ್ಚುವರಿ ಇದ್ದ ರಾಗಿಯನ್ನು ಕೆಳಗೆ ಸುರಿದು 50 ಕೆ.ಜಿ. ಮಾತ್ರ ತೂಕ ಮಾಡಿ ತೆಗೆದುಕೊಳ್ಳಲಾಗುತ್ತಿದೆ.

ರೈತರು ಬಾಡಿಗೆ ವಾಹನದಲ್ಲಿ ತಂದು ದಿನಗಟ್ಟಲೆ ಕಾದು ಹೈರಾಣಾಗುತ್ತಿದ್ದಾರೆ. ರೈತರ ಸಮಸ್ಯೆ ಅರ್ಥಮಾಡಿಕೊಳ್ಳಬೇಕು ಎಂದು ಎಚ್ಚರಿಕೆ ನೀಡಿದರು.

# ರಸ್ತೆಗೆ ಚಾಚಿದ ಮರ: ಪ್ರಯಾಣಿಕರ ಪರದಾಟ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಆಲೂರು: ಕಸಬಾ ಬೈರಾಪುರದಿಂದ ವುಗ್ಗೆ ಹಾಗೂ ಅಲೂರಿನಿಂದ ಕಾಮತಿಕೂಡಿಗೆ ಹೋಗುವ ರಸ್ತೆ ಇಕ್ಕೆಲಗಳಲ್ಲಿರುವ ಅಕೇಶಿಯಾ ಮರಗಳ ಕೊಂಬೆಗಳು ರಸ್ತೆಗೆ ಬಾಗಿಕೊಂಡಿವೆ.

ಕೆಲವು ಮರಗಳು ಒಣಗಿದ ಸ್ಥಿತಿಯಲ್ಲಿದ್ದು, ಮಳೆ, ಗಾಳಿ ಬರುವ ಸಂದರ್ಭದಲ್ಲಿ ವಾಹನಗಳು ಹಾಗೂ ಪಾದಚಾರಿಗಳು ಜೀವ ಕೈಯಲ್ಲಿ ಹಿಡಿದು ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆಯಲ್ಲಿ ಓಡಾಡುವ ಪಾದಚಾರಿಗಳು, ವಾಹನ ಸವಾರರಿಗೆ ನೆರಳಿನ ಆಸರೆಯಾಗಲಿ ಎಂಬ ಉದ್ದೇಶದಿಂದ 35 ವರ್ಷಗಳ ಹಿಂದೆ ಅರಣ್ಯ ಇಲಾಖೆಯು ರಸ್ತೆಯ ಎರಡೂ ಬದಿಗಳಲ್ಲಿ ಹಾಕಿದ್ದ ಅಕೇಶಿಯಾ ಮರಗಳು ಹೆಮ್ಮರವಾಗಿ ಬೆಳೆದು ನಿಂತಿವೆ. ತಿರುವುಗಳಲ್ಲಿ ಹಾಗೂ ಎದುರಿನಿಂದ ಬರುವ ವಾಹನಗಳು ಕಾಣಿಸದೇ ಇರುವುದರಿಂದ ಹೆಚ್ಚು ಅಪಘಾತಗಳು ಸಂಭವಿಸಿವೆ. ವಾರದಿಂದ ಸುರಿಯುತ್ತಿರುವ ಗಾಳಿ, ಮಳೆಗೆ ಆಲೂರುನಿಂದ ಕಾಮತಿಕೂಡಿಗೆವರೆಗೂ ಹಲವು ಮರ ಹಾಗೂ ಮರದ ಕೊಂಬೆಗಳು ಅಲ್ಲಲ್ಲಿ ಬಿದ್ದಿದ್ದು, ತೆರವುಗೊಳಿಸಲು ಹರಸಾಹಸ ಪಡಬೇಕಾಯಿತು. ವಾಹನ ಮತ್ತು ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಓಡಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಸಂಚಾರಕ್ಕೆ ಅಡ್ಡಿಯಾಗಿರುವ ಮರಗಳನ್ನು ಕೂಡಲೇ ತೆರವು ಮಾಡುವಂತೆ ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ.

ಅಕೇಶಿಯಾ ಮರದ ಬೇರುಗಳು ಭೂಮಿಯಲ್ಲಿ ಆಳವಾಗಿರದೇ ಮೇಲ್ಪದರದಲ್ಲಿ ಅಗಲವಾಗಿ ಬೆಳೆಯುತ್ತಿದ್ದು, ಸ್ವಲ್ಪ ಗಾಳಿ, ಮಳೆಯಾದರೂ ಮರಗಳು ನೆಲಕ್ಕೆ ಉರುಳುತ್ತವೆ. ಐದಾರು ವರ್ಷಗಳಿಂದ ಮುಂಗಾರು ಮಳೆ, ಗಾಳಿ ಪ್ರಾರಂಭವಾದ ಸಂದರ್ಭದಲ್ಲಿ ಅಲ್ಲಲ್ಲಿ ಮರದ ಕೊಂಬೆಗಳು ಬೀಳುವುದರಿಂದ ಸಂಚಾರಕ್ಕೆ ತೊಂದರೆಯಾಗಿತ್ತು.

ಐದಾರು ದಿನಗಳಿಂದ ಈ ಭಾಗದಲ್ಲಿ ಗಾಳಿ, ಮಳೆಯಾಗುತ್ತಿದ್ದು, ರಸ್ತೆ ಬದಿಯಲ್ಲಿರುವ ಮರಗಳು ಅಥವಾ ಕೊಂಬೆಗಳು ರಸ್ತೆಗೆ ಉರುಳುತ್ತಿವೆ. ರಸ್ತೆ ಬದಿಯಲ್ಲಿ ಮರಗಳು ಇರುವುದರಿಂದ ಎದುರಿನಿಂದ ಬರುವ ವಾಹನಗಳು ತಿರುವು ರಸ್ತೆಯಲ್ಲಿ ಕಾಣಿಸದಂತಾಗಿದೆ. ಮುಂಗಾರು ಮಳೆ ಪ್ರಾರಂಭವಾಗುವ ಮೊದಲು ಸಂಚಾರಕ್ಕೆ ಅಡ್ಡಿಯಾಗುವ ಮರಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಸಾರ್ವಜನಿಕರ ಒತ್ತಾಯ.

# ಕ್ಯಾಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಸಂದೀಪ್ ಅಧ್ಯಕ್ಷ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಕ್ಯಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ಕೆ. ಸಂದೀಪ್ ಹಾಗೂ ಉಪಾಧ್ಯಕ್ಷರಾಗಿ ಸಂದೇಶ್ ಕೀರ್ತಿ ಅವಿರೋಧ ಆಯ್ಕೆಯಾಗಿದ್ದಾರೆ.

ಕಳೆದ 10 ವರ್ಷದಿಂದ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಡೆಯದೆ ಅವಿರೋಧ ಆಯ್ಕೆ ನಡೆಯುತ್ತಿತ್ತು.

ಈ ಬಾರಿ 12 ನಿರ್ದೇಶಕ ಸ್ಥಾನಕ್ಕೆ ಚುನಾವಣೆ ನಡೆದಿತ್ತು. 12 ನಿರ್ದೇಶಕರು ಅವಿರೋಧವಾಗಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡಿದ್ದಾರೆ. ಚುನಾವಣಾ ಅಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕ ಮಂಜುನಾಥ್ ಕರ್ತವ್ಯ ನಿರ್ವಹಿಸಿದರು.

ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಕಬ್ಬಿನಹಳ್ಳಿ ಜಗದೀಶ್, ನಿರ್ದೇಶಕರಾದ ಡಿ. ರಾಜ್ ಕುಮಾರ್, ಕೆ.ಜಿ. ಧನಂಜಯ್, ಜೆ.ಎಸ್. ಚಂದ್ರಶೇಖರ್, ಜೆ.ಇ. ಮೊಗಣ್ಣ, ಎ.ಬಿ. ರಾಜು, ಈರಪ್ಪ ಶೆಟ್ಟಿ, ಎಂ.ಎಂ. ನೇತ್ರಾವತಿ, ನಾಗವೇಣಿ ಇತರರಿದ್ದರು.

# ಮೇ 30ಕ್ಕೆ ಕೇಂದ್ರದ ವಿರುದ್ಧ ರಾಷ್ಟ್ರಾದ್ಯಂತ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ದೇಶದ ಸಂಪತ್ತು ಸೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸುವ ಕಾರ್ಮಿಕರಿಗೆ ಸೂಕ್ತ ಸೌಲಭ್ಯಕ್ಕಾಗಿ ಆಗ್ರಹಿಸಿ ಮೇ 30 ರಂದು ರಾಷ್ಟ್ರಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಿಐಟಿಯು ರಾಜ್ಯಾಧ್ಯಕ್ಷೆ ಎಸ್. ವರಲಕ್ಷ್ಮಿ ತಿಳಿಸಿದರು.

ನಗರದ ಶ್ರಮ ಕಚೇರಿಯಲ್ಲಿ ಸಿಐಟಿಯು ಜಿಲ್ಲಾ ಸಮಿತಿಯ ವತಿಯಿಂದ ಹಮ್ಮಿಕೊಂಡಿದ್ದ ಸಾರ್ವತ್ರಿಕ ಮುಷ್ಕರದ ಸಿದ್ಧತಾ ಸಭೆಯಲ್ಲಿ ಮಾತನಾಡಿ, ಮೋದಿ ಸರ್ಕಾರ ಹಿಂದು ಹೆಸರಿನಲ್ಲಿ ಅಭಿವೃದ್ಧಿ ಮರೆತಿದೆ. ಶ್ರಮಿಕರ ಪರವಾಗಿರುವ ಕಾನೂನುಗಳನ್ನು ಬಂಡವಾಳಗಾರರ ಪರವಾಗಿ ಬದಲಾಯಿಸಿ 4 ಸಂಹಿತೆಗಳನ್ನು ಘೋಷಣೆ ಮಾಡುತ್ತಿದ್ದಾರೆ. ಅದರಲ್ಲಿ ವೇತನ ಸಂಹಿತೆ ಎಂದು ಕರೆಯುತ್ತಾರೆ. ನಾವು ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳು ಸಿಐಟಿಯು ಪ್ರತಿಪಾದನೆ ಮಾಡುತ್ತಿರುವುದು ಏನೆಂದರೆ, ನಮ್ಮ ದೇಶದಲ್ಲಿ 100ಕ್ಕೆ 80ರಷ್ಟು ಜನ ಯಾವುದೇ ಕಾನೂನು ವ್ಯಾಪ್ತಿಗೆ ಬರದೆ ಇರುವರಿಗೆ ಕನಿಷ್ಠ ವೇತನ ಖಾತ್ರಿಪಡಿಸಬೇಕು. ದಿನಕ್ಕೆ 7ನೇ ವೇತನ ಆಯೋಗ ನಿಗದಿಪಡಿಸಿರುವ 600 ರೂ. ವೇಜಸ್ ಕೊಡಬೇಕು. ಅದಕ್ಕೆ ಬೇಕಾದ ಕಾನೂನುಗಳನ್ನು ತರಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ ಕನಿಷ್ಠ ವೇತನವನ್ನು ಕೂಡ ಜಾರಿ ಮಾಡದೆ ನಿರ್ಲಕ್ಷ ಮಾಡುತ್ತಿದೆ. ಬಂಡವಾಳಶಾಹಿಗಳು ಹೇಳುವ ಹಾಗೆ ದಿನಕ್ಕೆ 177 ರೂ. ಕೊಡಬೇಕು ಎಂದು ಹೇಳುತ್ತಿದ್ದಾರೆ. ಈ ವೇಜ್ ಕೋಡ್ ನಲ್ಲಿ ಬೋನಸ್ ಗ್ರಾಜುಟಿ ಎಲ್ಲವನ್ನು ಸಡಿಲವಾಗುತ್ತಿದೆ, ಇದರಿಂದ ದೇಶದಲ್ಲಿ ಇನ್ನ ಮುಂದೆ ವೇತನ ಹೆಚ್ಚಾಗುವುದಿಲ್ಲ ಇದಕ್ಕೆ ದೊಡ್ಡ ಪೆಟ್ಟು ಬಿದ್ದಿದೆ ಎಂದು ಆಕರೋಶ ವ್ಯಕ್ತಪಡಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ .ಪುಷ್ಪಾ, ಜಿಲ್ಲಾಧ್ಯಕ್ಷ ಧರ್ಮೇಶ್, ಅರವಿಂದ್ ಇದ್ದರು.

# ಆರೋಗ್ಯ ಕೇಂದ್ರಕ್ಕೆ ಸೌಲಭ್ಯ ಕಲ್ಪಿಸಲು ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ತಾಲ್ಲೂಕಿನ ಅತ್ತಿಹಳ್ಳಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಸುತ್ತಲಿನ 25ಕ್ಕೂ ಹೆಚ್ಚು ಗ್ರಾಮಸ್ಥರಿಗೆ ಈ ಆಸ್ಪತ್ರೆ ಆಧಾರವಾಗಿದೆ. ಈಗ ಮೂಲಸೌಕರ್ಯಗಳ ಅವ್ಯವಸ್ಥೆ ಹಾಗು ವೈದ್ಯರ ಕೊರತೆಯಿಂದಾಗಿ ಜನರು ಅನೇಕ ಸಮಸ್ಯೆ ಎದುರಿಸುತ್ತಿದ್ದಾರೆ. ಕಳೆದ ಮೂರು ತಿಂಗಳಿಂದ ವೈದ್ಯರ ಹಾಜರಾತಿ ಇಲ್ಲದಿರುವುದು, ವಯಸ್ಕರು, ಮಕ್ಕಳು, ಬಾಣಂತಿಯರಿಗೆ ತೀವ್ರ ಅನಾನುಕೂಲವನ್ನುಂಟು ಮಾಡಿದೆ. ಪರಿಸ್ಥಿತಿ ಹೀಗಿರುವಾಗ ಅನಿವಾರ್ಯವಾಗಿ ಹೆತ್ತೂರು, ಶನಿವಾರಸಂತೆ ಹಾಗು ಸಕಲೇಶಪುರದಂತಹ ದೂರದ ಪ್ರದೇಶಗಳಿಗೆ ಚಿಕಿತ್ಸೆಗಾಗಿ ತೆರಳುವ ಅನಿವಾರ್ಯತೆ ಗ್ರಾಮಸ್ಥರಿಗೆ ಎದುರಾಗಿದೆ. ಅದರಿಂದ ಸಮಯದೊಂದಿಗೆ ಆರ್ಥಿಕ ಭಾರವೂ ಹೆಚ್ಚುತ್ತಿದೆ.

ಈಗಾದರೂ ಸಂಬಂಧಪಟ್ಟ ಆರೋಗ್ಯ ಇಲಾಖೆ, ಸ್ಥಳೀಯ ಜನಪ್ರತಿನಿಧಿಗಳು ಹಾಗು ಮುಖಂಡರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಮೂಲಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

## ಗಮನ ಹರಿಸದ ಜನಪ್ರತಿನಿಧಿಗಳು

ಕಳೆದ 20 ವರ್ಷಗಳ ಹಿಂದೆ ಅತ್ತಿಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಗುಣಮಟ್ಟದ ಚಿಕಿತ್ಸೆ, ಮೂಲಭೂತ ಸೌಕರ್ಯಕ್ಕೆ ಹೆಸರುವಾಸಿಯಾಗಿತ್ತು. ಸುತ್ತಲಿನ ಎಲ್ಲಾ ಜನರು ಈ ಆಸ್ಪತ್ರೆಯನ್ನೇ ಅವಲಂಬಿಸಿದ್ದರು. ಆದರೆ ದಿನಕಳೆದಂತೆ ನಿರ್ಲಕ್ಷ್ಯಕ್ಕೆ ಒಳಪಟ್ಟು ಈಗ ಖಾಲಿ ಖಾಲಿಯಾಗಿದೆ. ಜನಪ್ರತಿನಿಧಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಕೇವಲ ಕ್ರಮದ ಭರವಸೆ ನೀಡುತ್ತಾರೆ ಹೊರತು ಫಲಿತಾಂಶ ಮಾತ್ರ ಶೂನ್ಯವಾಗಿದೆ ಎಂದು ಸ್ಥಳೀಯರು ಅಸಮಾಧಾನ ವ್ಯಕ್ತಪಡಿಸಿದರು.

# ಸಮಾನತೆಗಾಗಿ ಅಂಬೇಡ್ಕರ್ ತತ್ವಾದರ್ಶ ಪಾಲಿಸಿ



ಹೊಳೆನರಸೀಪುರ: ಬುದ್ಧ, ಬಸವಣ್ಣ ಸಾರಿದ ಸಮಾನತೆಯ ತತ್ವ ಮತ್ತು ಆದರ್ಶವನ್ನೇ ಡಾ.ಬಿ.ಆರ್. ಅಂಬೇಡ್ಕರ್ ಅವರೂ ಪ್ರತಿಪಾದಿಸಿದ್ದಾರೆ. ನಾವೆಲ್ಲರೂ ಅವರ ಆದರ್ಶ ಮತ್ತು ತತ್ವಗಳನ್ನು ಪಾಲಿಸೋಣ ಎಂದು ಮೈಸೂರಿನ ಉರಿಲಿಂಗಿ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಸಲಹೆ ನೀಡಿದರು.


ಹಿರೇಬೆಳಗಲಿ ಗ್ರಾಮದಲ್ಲಿ ಭಾನುವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಅನಾವರಣಗೊಳಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಬಸವೇಶ್ವರರ ಅನುಭವ ಮಂಟಪದಲ್ಲಿ ಅನೇಕರ ವಿರೋಧ ಇದ್ದರೂ, ಮಾದಾರ ಚನ್ನಯ್ಯ, ಅಲಕ್ಕಿ ಲಕ್ಕಮ್ಮನವರಿಗೆ ದೀಕ್ಷೆ ಕೊಟ್ಟು, ಸರ್ವಧರ್ಮ ಸಮಾನತೆಯನ್ನು ಬಸವಣ್ಣ ಸಾರಿದರು. ಲಂಡನ್‌ನ ಥೇಮ್ಸ್ ನದಿಯ ದಡದಲ್ಲಿ ಬಸವಣ್ಣನ ಪ್ರತಿಮೆ ಪ್ರತಿಷ್ಠಾಪಿಸಿದ್ದಾರೆ. ಇದರ ಕೆಳಗೆ ಸ್ಟಾಚ್ಯೂ ಆಫ್ ಈಕ್ವಲಿಟಿ ಎಂದು ಬರೆಯಲಾಗಿದೆ. ಈ ಬರವಣಿಗೆ ಇಂದಿಗೂ ಸಮಾನತೆ ಪ್ರತಿಪಾದಿಸುತ್ತಿದೆ ಎಂದರು.

ಮಾಜಿ ಸಚಿವ ಎಚ್.ಕೆ.ಕುಮಾರಸ್ವಾಮಿ ಮಾತನಾಡಿ, ಹಿರೇಬೆಳಗುಲಿ ನಾನು ಹುಟ್ಟಿ ಬೆಳೆದ ಊರು. ಇಲ್ಲಿ ಪ್ರತಿಮೆ ಸ್ಥಾಪನೆಗೆ ಅವಕಾಶ ನೀಡಿದ್ದು ಸಂತೋಷ ತಂದಿದೆ. ಹಿರೇಬೆಳಗುಲಿ ಒಂದು ಸಣ್ಣ ಕುಗ್ರಾಮ. ಈ ಗ್ರಾಮದ ಅನೇಕರು ಎತ್ತರಕ್ಕೆ ಬೆಳೆದಿದ್ದಾರೆ ಎಂದರು. ವೀರಶೈವ ಮುಖಂಡ, ನಿವೃತ್ತ ಉಪನ್ಯಾಸಕ ಎಚ್.ಎಸ್.ಪ್ರಭುಶಂಕರ್ ಮಾತನಾಡಿ, ಡಾ. ಅಂಬೇಡ್ಕರ್ ಅವರೂ ಸಮಾನತೆಯನ್ನು ಪ್ರತಿಪಾದಿಸಿದರು. ಮೀಸಲಾತಿ ಕಾರಣ ಸಮಾಜದಲ್ಲಿ ಅಸಮಾನತೆ ಕಡಿಮೆ ಆಗಿದೆ ಎಂದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಚಂಚಲಾ ಕುಮಾರಸ್ವಾಮಿ, ಎಚ್.ವೈ. ಚಂದ್ರಶೇಖರ್, ಡಿವೈಎಸ್‌ಪಿ ಕುಲಕರ್ಣಿ, ಗ್ರಾಮದ ಮುಖಂಡ ರಾಮಯ್ಯ, ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್.ಡಿ. ಬೊಮ್ಮಯ್ಯ, ಎಚ್.ಎಸ್. ಹೇಮಂತ್, ಮುಖಂಡರಾದ ಸೋಮಶೇಖರ್ ಹಾಗೂ ಮೋಹನ್ ಉಪಸ್ಥಿತರಿದ್ದರು.

# ಸಾಹಿತಿಗಳಿರುವ ದೇಶದಲ್ಲಿ ಯುದ್ಧ ಆಗಬಾರದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಕವಿಗಳು ಸಾಹಿತಿಗಳಿರುವ ದೇಶದಲ್ಲಿ ಯುದ್ಧಗಳೇ ಆಗಬಾರದು ಎಂದು ಲೇಖಕ ದೀಕ್ಷಿತ್ ನಾಯರ್ ಅಭಿಪ್ರಾಯಪಟ್ಟರು.

ನಗರದ ರಿಂಗ್ ರಸ್ತೆಯಲ್ಲಿರುವ ಅಕ್ಷರ ಅಕಾಡೆಮಿಯಲ್ಲಿ ಈಚೆಗೆ ನಡೆದ ಬುಕ್ ಮಾತು ಎಂಟನೇ ಸರಣಿ ಕಾರ್ಯಕ್ರಮದಲ್ಲಿ ಮಾಗಧ ಕೃತಿ ಕುರಿತು ಮಾತನಾಡಿದ ಅವರು, ಕವಿ ಹಾಗೂ ಲೇಖಕರ ಸಾಮಾಜಿಕ ಜವಾಬ್ದಾರಿ ಎಷ್ಟಿದೆ ಎಂಬುದನ್ನು ಕೃತಿ ಎತ್ತಿ ಹಿಡಿಯುತ್ತದೆ. ಕನ್ನಡದ ಕಣ್ಣುಗಳಾದ ಕುವೆಂಪು ಮತ್ತು ದ.ರಾ. ಬೇಂದ್ರೆ ಮೊದಲಾದ ಮಹಾಕವಿಗಳು ಇಂತಹ ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಸಾಹಿತ್ಯವನ್ನು ನಿರ್ಮಿಸುತ್ತಾ ಬಂದಿರುವುದರಿಂದಲೇ ಇಂದಿಗೂ ನಮ್ಮ ಹೃನ್ಮಗಳಲ್ಲಿ ಉಳಿದಿದ್ದಾರೆ. ಅವರಿಲ್ಲದೆ ಬದುಕಿನಲ್ಲಿ ಗೆಲ್ ಬಲ್ಲಿರಾ ಪುಸ್ತಕವೂ ಯಾವುದೇ ಪ್ರಚಾರವಿಲ್ಲದೆ ಸಮಾಜದಿಂದ ಗುರುತಿಸಿಕೊಳ್ಳದೆಯೂ ಸಮಾಜ ಸೇವೆಯನ್ನು ಮಾಡುತ್ತಿರುವ ಅಪರೂಪದ ವ್ಯಕ್ತಿಗಳ ಸಾಧನೆಯ ಕಥೆಯಾಗಿದೆ. ಇದು ಅಂಕಣಗಳ ಸಂಗ್ರಹವಾಗಿದ್ದು ದೇವರಿಗೆ ಸಲ್ಲುವ ಮಸಣದ ಹೂ ಗಟ್ಟಿಗಿತ್ತಿ ನೀಲಮ್ಮ, ಅವರು ಧನ್ಯ ನಾವು ಮಾನ್ಯ, ಕಣ್ಣೆಲ್ಲ ಕನಸುಗಳಿವೆ ಕಣ್ಮಣಿ ಅಫ್ಜಲ್ ಮೊಹಮ್ಮದ್, ಕನ್ನಡ ಕಿಂಕರ ಕೆ. ರಾಜಕುಮಾರ್ ಹೀಗೆ ವಿಶಿಷ್ಟರಲ್ಲಿ ವಿಶಿಷ್ಟರಾಗಿ ನಮ್ಮ ನಡುವೆ ಸದ್ದು - ಸುದ್ದಿ ಇಲ್ಲದೆ ಬದುಕುತ್ತಿರುವ ವ್ಯಕ್ತಿ ಹಾಗೂ ವ್ಯಕ್ತಿತ್ವದ ಅನಾವರಣ. ಹಾಸನದ ಅಕ್ಷರ ಬುಕ್ ಹೌಸ್ ಜ್ಞಾನ ವನವಾಗಿದ್ದು, ತನ್ನ ಹೆಸರಿನಂತೆ ಜನಮನದಲ್ಲಿ ಅಕ್ಷರ ಪ್ರೀತಿ ಬಿತ್ತುವ ಸಾಮಾಜಿಕ ಹೊಣೆಯನ್ನು ಚಂದವಾಗಿ ನಿರ್ವಹಿಸುತ್ತಿದೆ. ಅಕ್ಷರ ಪ್ರೀತಿಯು ಜಿಲ್ಲೆಗಳನ್ನಷ್ಟೇ ಅಲ್ಲದೇ ಅಲ್ಲದೇ ದೇಶ ದೇಶಗಳನ್ನೂ ಬೆಸೆಯಬಲ್ಲದು. ಅದು ಅಕ್ಷರ ಪ್ರೀತಿ ಗಿರುವ ತಾಕತ್ತು ಎಂದರು.

# ಹೊಯ್ಸಳರ ನೆನಪುಗಳು



ಹಾಸನ ಜಿಲ್ಲೆಗೆ ಹೊಯ್ಸಳರ ಕೊಡುಗೆ ಅಪಾರವಾಗಿದೆ ಎಂಬುದಕ್ಕೆ ಜಿಲ್ಲೆಯಲ್ಲಿರುವ ಐತಿಹಾಸಿಕ ದೇವಾಲಯಗಳೇ ಸಾಕ್ಷಿ. ಹೊಯ್ಸಳರ ರಾಜಧಾನಿಯಾಗಿದ್ದ ದ್ವಾರಸಮುದ್ರ ಇಂದಿನ ಹಳೇಬೀಡು ಪ್ರವಾಸಿ ತಾಣವಾಗಿ ಜಗತ್ತಿನಾದ್ಯಂತ ಚಿರಪರಿಚಿತವಾಗಿದೆ. ಹೊಯ್ಸಳರ ಇತಿಹಾಸ, ಕಲೆ ಸಂಸ್ಕೃತಿ ಪರಂಪರೆ ಬಗ್ಗೆ ಹಾಸನದ ಡಾ. ಎನ್. ರಮೇಶ್ ಅವರ ಸಂಗ್ರಹಯೋಗ್ಯ ಬರಹಗಳು ನಿಮ್ಮ ನೆಚ್ಚಿನ ಕನ್ನಡ ಪೋಸ್ಟ್ ಪತ್ರಿಕೆಯಲ್ಲಿ ಇಂದಿನಿಂದ ಪ್ರಕಟಗೊಳ್ಳಲಿದೆ.

**ಹೊಯ್ಸಳ ಶಿಲ್ಪಿಗಳ ಹೆಸರುಗಳು**

350 ವರ್ಷಗಳ ಕಾಲ ನಾಡನ್ನಾಳಿದ ಹೊಯ್ಸಳರು ಸಾವಿರಾರು ದೇವಾಲಯಗಳನ್ನು ನಮ್ಮ ನಾಡಿಗೆ ನೀಡಿ ಅದರಲ್ಲಿ ಅಡಗಿರುವ ಅತ್ಯದ್ಭುತ ಶಿಲ್ಪಕಲಾ ಕೃತಿಗಳನ್ನು ನಮ್ಮೆಲ್ಲರಿಗೂ ನೀಡಿರುವುದು ಹೊಯ್ಸಳರ ಶಿಲ್ಪಿಗಳು.

ನಿತ್ಯ ಸ್ಮರಣೀಯರಾದ ಹೊಯ್ಸಳರ ಶಿಲ್ಪಿಗಳ ಹೆಸರುಗಳು ಇಂದಿನ ಪೀಳಿಗೆಯ ಜನರಿಗೆ ತಿಳಿಯದೆ ಇರುವುದು ಬಹಳ ಬೇಸರದ ಸಂಗತಿ. ಸಾವಿರಾರು ಶಿಲ್ಪಿಗಳು ತಮ್ಮ ಅದ್ಭುತ ಕೈಚಳಕದಿಂದ ಅತ್ಯಮೋಘ ಕಲಾ ಕೃತಿಗಳನ್ನು ನೀಡಿದರು. ಕೆಲವೇ ಕೆಲವು ಶಿಲ್ಪಿಗಳ ಹೆಸರು ಮಾತ್ರ ಇಂದು ಉಳಿದಿದೆ.

ಹೊಯ್ಸಳರ ಉಚ್ಛ್ರಾಯ ಕಾಲದ ಮಹಾಶಿಲ್ಪಿ ಮಲ್ಲಿ ತಮ್ಮ ಅಮೃತಪುರ, ಹಾರನಹಳ್ಳಿ, ನುಗ್ಗೆಹಳ್ಳಿ ಜಾವಗಲ್, ಸೋಮನಾಥಪುರ, ಗೋವಿಂದನಹಳ್ಳಿ ಹೀಗೆ ಅನೇಕ ಕಡೆ ತನ್ನ ಕೊಡುಗೆಯನ್ನು ನೀಡಿದ್ದಾನೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್ 29

1236: ದಿಲ್ಲಿ ಸುಲ್ತಾನರ ಗುಲಾಮಿ ವಂಶದ ಸುಲ್ತಾನ್ ಇಲ್ತುತ್ಮಿಷ್ ನಿಧನ

1639: ಮುಘಲ್ ಸಾಮ್ರಾಟ್ ಷಾ ಜಹಾನ್ ದೆಹಲಿಯಲ್ಲಿ ಕೆಂಪುಕೋಟೆ (ರೆಡ್ ಫೋರ್ಟ್) ನಿರ್ಮಾಣದ ಶಿಲಾನ್ಯಾಸ ನೆರವೇರಿಸಿದರು.

1954: ಭಾರತದ ಪ್ರಧಾನಮಂತ್ರಿ ಜವಾಹರಲಾಲ್: ನೆಹರು ಮತ್ತು ಚೀನಾದ ಪ್ರಧಾನಮಂತ್ರಿ ಚೌಎನ್‌ಲೈ ಅವರು ಪಂಚಶೀಲ ಸಿದ್ಧಾಂತಕ್ಕೆ ಸಹಿ ಹಾಕಿದರು. ಇದು ಭಾರತದ ವಿದೇಶಾಂಗ ನೀತಿಯ ಪ್ರಮುಖ ತತ್ವಗಳಾಗಿ ಪರಿಗಣಿಸಲಾಯಿತು .

### ಜನ್ಮ ದಿನ

1848: ಚಿತ್ರ ಕಲಾವಿದ ರಾಜಾ ರವಿ ವರ್ಮಾ

1891: ತಮಿಳು ಕವಿ ಮತ್ತು ಸಾಮಾಜಿಕ ಚಿಂತಕ ಭಾರತಿದಾಸನ್

# ಪಂಚಶೀಲ ತತ್ವಗಳ ಒಪ್ಪಂದ: ನೆಹರು ಇರಿಸಿದ ತಪ್ಪು ಹೆಜ್ಜೆಯೇ?

## ಚೀನಾ ನಂಬಿ ಮಾಡಿಕೊಂಡ ಒಪ್ಪಂದಕ್ಕೆ ಇಂದಿಗೆ 71 ವರ್ಷ!

ಪಂಚಶೀಲ ತತ್ವಗಳು ಅಥವಾ ಶಾಂತಿಯುತ ಸಹಬಾಳ್ವೆಯ ಐದು ತತ್ವಗಳು, ಭಾರತ ಮತ್ತು ಚೀನಾದ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸಲು 1954ರಲ್ಲಿ ಸಹಿ ಮಾಡಲಾದ ಒಪ್ಪಂದದ ಮೂಲಕ ಔಪಚಾರಿಕವಾಗಿ ರೂಪಿತವಾದವು. ಈ ಒಪ್ಪಂದವು ಶಾಂತಿಯುತ ಸಹಕಾರ, ಪರಸ್ಪರ ಗೌರವ ಮತ್ತು ರಾಷ್ಟ್ರಗಳ ಸಾರ್ವಭೌಮತ್ವದ ಗೌರವವನ್ನು ಉತ್ತೇಜಿಸುವ ಗುರಿಯನ್ನು ಹೊಂದಿತ್ತು. ಈ ವರದಿ ಪಂಚಶೀಲ ಒಪ್ಪಂದದ ಹಿನ್ನೆಲೆ, ತತ್ವಗಳು, ಸಹಿಯ ಪ್ರಕ್ರಿಯೆ, ಉದ್ದೇಶಗಳು, ಪರಿಣಾಮ ಮತ್ತು ಇತಿಹಾಸದಲ್ಲಿ ಅದರ ಮಹತ್ವವನ್ನು ಈ ಲೇಖನ ತಿಳಿಸುತ್ತದೆ.

1950ರ ದಶಕದ ಆರಂಭದಲ್ಲಿ ಭಾರತವು ಸ್ವಾತಂತ್ರ್ಯ ಪಡೆದ ನಂತರ ಮತ್ತು ಚೀನಾದಲ್ಲಿ ಕಮ್ಯುನಿಸ್ಟ್ ಕ್ರಾಂತಿಯ ನಂತರ ಎರಡೂ ರಾಷ್ಟ್ರಗಳು ತಮ್ಮ ವಿದೇಶಾಂಗ ನೀತಿಗಳನ್ನು ಸ್ಥಾಪಿಸುವ ಹಂತದಲ್ಲಿದ್ದವು.


ಭಾರತವು ಜವಾಹರಲಾಲ್ ನೆಹರು ಅವರ ನೇತೃತ್ವದಲ್ಲಿ ಅಲಿಪ್ತ ಚಳವಳಿಯನ್ನು ಅಳವಡಿಸಿಕೊಂಡಿತು. ಚೀನಾವು ಮಾವೋ ಝೆಡಾಂಗ್ ಅವರ ಅಡಿಯಲ್ಲಿ ಸಮಾಜವಾದಿ ಆಡಳಿತವನ್ನು ಸ್ಥಾಪಿಸಿತು.

ಈ ಸಂದರ್ಭದಲ್ಲಿ ಟಿಬೆಟ್‌ನ ಸ್ಥಿತಿಯು ಎರಡೂ ರಾಷ್ಟ್ರಗಳ ನಡುವಿನ ಪ್ರಮುಖ ವಿಷಯವಾಗಿತ್ತು. 1950ರಲ್ಲಿ ಚೀನಾ ಟಿಬೆಟ್ ಅನ್ನು ವಶಪಡಿಸಿಕೊಂಡಿತ್ತು. ಇದರಿಂದ ಭಾರತವು ತನ್ನ ನಿಲುವನ್ನು ಸ್ಪಷ್ಟಪಡಿಸಬೇಕಾಯಿತು.

ಭಾರತ ಮತ್ತು ಚೀನಾದ ನಡುವೆ ವಾಣಿಜ್ಯ, ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸಲು ಇದರ ಅಗತ್ಯವಿತ್ತು. ಟಿಬೆಟ್ ಮಾರ್ಗವಾಗಿ ವ್ಯಾಪಾರವನ್ನು ನಿಯಂತ್ರಿಸಲು ಮತ್ತು ಗಡಿಯ ಸ್ಥಿರತೆಯನ್ನು ಕಾಪಾಡಲು ಒಂದು ಔಪಚಾರಿಕ ಒಪ್ಪಂದದ ಅಗತ್ಯವಿತ್ತು. ಇದೇ ಹಿನ್ನೆಲೆಯಲ್ಲಿ ಪಂಚಶೀಲ ಒಪ್ಪಂದ ರೂಪುಗೊಂಡಿತು.

### ಪಂಚಶೀಲದ ಐದು ತತ್ವಗಳೇನು

- ಪರಸ್ಪರ ಗೌರವ ಭೂಪ್ರದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಪರಸ್ಪರ ಗೌರವ.
- ಪರಸ್ಪರ ಅಪಾಯಕಾರಿಯಾಗದಿರುವುದು- ಆಕ್ರಮಣ ಮಾಡದಿರುವುದು.
- ಪರಸ್ಪರ ಹಸ್ತಕ್ಷೇಪ ತಡೆಗಟ್ಟುವಿಕೆ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು.
- ಸಮಾನತೆ ಮತ್ತು ಪರಸ್ಪರ ಲಾಭ ಸಮಾನತೆಗೆ ಆಧಾರಿತ ಲಾಭದ ಸಹಕಾರ.
- ಶಾಂತಿಯುತ ಸಹಬಾಳ್ವೆ ಒಟ್ಟಿಗೆ ಬದುಕುವುದು. ಈ ತತ್ವಗಳು ರಾಷ್ಟ್ರಗಳ ನಡುವಿನ ಶಾಂತಿ, ಸ್ಥಿರತೆ ಮತ್ತು ಸಹಕಾರವನ್ನು ಉತ್ತೇಜಿಸುವ ಗುರಿಯನ್ನು ಹೊಂದಿದ್ದವು.



### ಒಪ್ಪಂದದ ಸಹಿ

ಪಂಚಶೀಲ ಒಪ್ಪಂದಕ್ಕೆ 29 ಏಪ್ರಿಲ್ 1954ರಂದು ಔಪಚಾರಿಕವಾಗಿ ಸಹಿ ಮಾಡಲಾಯಿತು. ಈ ಒಪ್ಪಂದವು ಚೀನಾದ ಟಿಬೆಟ್ ವಲಯ ಮತ್ತು ಭಾರತದ ನಡುವಿನ ವ್ಯಾಪಾರ ಮತ್ತು ಸಂಚಾರಕ್ಕೆ ಸಂಬಂಧಿಸಿದ ಒಪ್ಪಂದ ಎಂದು ಕರೆಯಲ್ಪಟ್ಟಿತು.

ಭಾರತದ ಪರವಾಗಿ ಪ್ರಧಾನಮಂತ್ರಿ, ಜವಾಹರಲಾಲ್ ನೆಹರು ಮತ್ತು ಚೀನಾದ ಪರವಾಗಿ ಪ್ರಧಾನಮಂತ್ರಿ ಚೌ ಎನ್‌ಲೈ ಪ್ರಮುಖ ಪಾತ್ರವಹಿಸಿದರು.

ಒಪ್ಪಂದವು ಶಾಂತಿಯುತ ಸಹಬಾಳ್ವೆಯ ತತ್ವಗಳನ್ನು ಪ್ರತಿಪಾದಿಸಿ, ಟಿಬೆಟ್ ಮಾರ್ಗವಾಗಿ ವ್ಯಾಪಾರವನ್ನು ಸುಗಮಗೊಳಿಸುವ ಗುರಿಯನ್ನು ಹೊಂದಿತ್ತು.

### ಆಗಿದ್ದೇನು?

ಚೀನಾದ ಉದ್ದೇಶದ ಕೊರತೆ: ಚೀನಾ ತನ್ನ ಆಕ್ರಮಣಕಾರಿ ನೀತಿಯ ಮೂಲಕ ತತ್ವಗಳನ್ನು ಪಾಲಿಸದ ಹಿನ್ನೆಲೆಯಲ್ಲಿ ಟೀಕೆ ಎದುರಿಸಿತು.

ಭಾರತದ ತಪ್ಪು ಗಣನೆ: ನೆಹರು ಅವರು ಚೀನಾದ ಉದ್ದೇಶಗಳನ್ನು ಸರಿಯಾಗಿ ಅಂದಾಜಿಸದ ಕಾರಣ ಒಪ್ಪಂದದ ವೈಫಲ್ಯ ಸಂಭವಿಸಿತು.

ಟಿಬೆಟ್‌ಗೆ ಆಘಾತ: ಟಿಬೆಟ್‌ನ ಸ್ವಾಯತ್ತತೆಯ ಆಸೆಗಳಿಗೆ ಹೊಡೆತ ನೀಡಿತು.

ಪಂಚಶೀಲ ಒಪ್ಪಂದವು ಭಾರತ-ಚೀನಾ ಸಂಬಂಧಗಳಲ್ಲಿ ಐತಿಹಾಸಿಕ ತಿರುವಿನ ಬಿಂದುವಾಗಿದೆ. ಶಾಂತಿಯುತ ಸಹಬಾಳ್ವೆಯನ್ನು ಉತ್ತೇಜಿಸುವ ಪ್ರಯತ್ನಗಳಾದರೂ, ಪ್ರಾಯೋಗಿಕ ಮಟ್ಟದಲ್ಲಿ ಅದು ಸೀಮಿತ ಯಶಸ್ಸು ಕಂಡಿತು. ಇದರಿಂದ ಭಾರತವು ವಿದೇಶಾಂಗ ನೀತಿಯಲ್ಲಿ ಹೆಚ್ಚಿನ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕೆಂಬ ಪಾಠ ಕಲಿಯಿತು.

### ಒಪ್ಪಂದದ ಪರಿಣಾಮಗಳು

ಪಂಚಶೀಲ ಒಪ್ಪಂದವು ಆರಂಭದಲ್ಲಿ ಸಕಾರಾತ್ಮಕ ಪರಿಣಾಮವನ್ನು ಬೀರಿತು. 1954ರಲ್ಲಿ ನೆಹರು ಚೀನಾ ಭೇಟಿ ನೀಡಿದರು. 1955ರಲ್ಲಿ ಬ್ಯಾಂಡುಂಗ್ ಸಮ್ಮೇಳನದಲ್ಲಿ ಭಾರತ ಮತ್ತು ಚೀನಾ ಒಟ್ಟಾಗಿ ಭಾಗವಹಿಸಿದ್ದವು.

ಆದರೆ, ದೀರ್ಘಕಾಲೀನ ಯಶಸ್ಸನ್ನು ಒಪ್ಪಂದ ಸಾಧಿಸಲಿಲ್ಲ. ಭಾರತವು ಟಿಬೆಟ್ ಚೀನಾದ ಭಾಗವೆಂದು ಒಪ್ಪಿಕೊಂಡು ಟಿಬೆಟಿಯನ್ನರ ಸ್ವಾತಂತ್ರ್ಯ ಆಕಾಂಕ್ಷೆಗಳಿಗೆ ಆಘಾತ ನೀಡಿತು. ಅಕ್ಸಾಯ್ ಚಿನ್ ಮತ್ತು ಅರುಣಾಚಲ ಪ್ರದೇಶದ ಗಡಿ ವಿವಾದಗಳು ತೀವ್ರಗೊಂಡು 1962ರ ಯುದ್ಧಕ್ಕೆ ಕಾರಣವಾಯಿತು.

**ರಾಜಕೀಯ ಪರಿಣಾಮ:** ನೆಹರು ಅವರ ತೀರ್ಮಾನವನ್ನು ಕೆಲವು ಮಂದಿ ವಿದೇಶಾಂಗ ನೀತಿಯ ದೋಷವೆಂದು ಟೀಕಿಸಿದರು. ಪಂಚಶೀಲ ತತ್ವಗಳು ಅಲಿಪ್ತ ಚಳವಳಿಯ ಭಾಗವಾಗಿ ಪ್ರಸಿದ್ಧಿಯನ್ನೂ ಪಡೆದವು, ಆದರೆ ಚೀನಾದ ಕ್ರಮಗಳಿಂದ ವಿಶ್ವಾಸ ಕುಸಿಯಿತು.

**ರಾಜತಾಂತ್ರಿಕ ಆರಂಭ:** ಭಾರತ-ಚೀನಾ ಆಧುನಿಕ ರಾಜತಾಂತ್ರಿಕ ಸಂಬಂಧಗಳಿಗೆ ಆರಂಭಿಕ ಹಂತ.

**ಅಲಿಪ್ತ ಚಳವಳಿಯ ತತ್ವ:** ಶೀತಲ ಸಮರದ ಕಾಲದಲ್ಲಿ ಶಾಂತಿಯುತ ಸಹಬಾಳ್ವೆಗೆ ಮಾದರಿ.

**ಶಾಂತಿಯ ಆದರ್ಶ:** ಜಾಗತಿಕವಾಗಿ ಶಾಂತಿಯ ಪರಿಕಲ್ಪನೆಯನ್ನು ಉತ್ತೇಜಿಸಿದವು.



### ಒಪ್ಪಂದದ ಉದ್ದೇಶಗಳು

ಗಡಿ ಸ್ಥಿರತೆ ಟಿಬೆಟ್ ಪ್ರದೇಶದ ಸುತ್ತಮುತ್ತ ಶಾಂತಿ ಕಾಪಾಡುವುದು.

ವ್ಯಾಪಾರ ಸಹಕಾರ ಟಿಬೆಟ್ ಮಾರ್ಗವಾಗಿ ಭಾರತ-ಚೀನಾ ವ್ಯಾಪಾರ ಸುಗಮಗೊಳಿಸುವುದು. ಡಿಪ್ಲೊಮ್ಯಾಟಿಕ್ ಸಂಬಂಧ ಉಭಯ ರಾಷ್ಟ್ರಗಳ ನಡುವಿನ ಸ್ನೇಹ ಬೆಳೆಸುವುದು. ಅಂತರರಾಷ್ಟ್ರೀಯ ಮಾದರಿ ಅಲಿಪ್ತ ಚಳವಳಿಯ ಸಂದರ್ಭದಲ್ಲಿ ಶಾಂತಿಯ ತತ್ವಗಳನ್ನು ಜಾಗತಿಕವಾಗಿ ಉತ್ತೇಜಿಸುವುದು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201
and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248